ದಿನಾಂಕ ೧೬-೦೩-೨೦೧೮ ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಃ ಶ್ರೀಮತಿ, ಆರ್. ಎಮ್. ಹೆಚ್. ವಕೀಲರಿಂದ</u>

ದಾವಾ ಆಸ್ತಿಯ ಪಹಣಿಯಲ್ಲಿ 1 ರಿಂದ 3 ನೇ ಪ್ರತಿವಾದಿಯರ ಹೆಸರನ್ನು ಮಾಲಿಕರು ಮತ್ತು ಸ್ವಾಧೀನದಾರರು ಎಂದು ಕಾಣಿಸಲಾಗಿದೆ ಎಂದರೆ ನಿಜ. ಆದರೆ ಅದು ಬೋಗಸ ದಾಖಲೆ. ಸಾಮಾನ್ಯವಾಗಿ ಉತಾರದಲ್ಲಿ ಆಸ್ತಿಯ ಮಾಲಿಕರನ್ನು ನಮೂದಿಸಲಾಗುತ್ತದೆ ಎಂದರೆ ನಿಜ. ಪ್ರತಿವಾದಿಯರಿಂದ ಸ್ವಾಧೀನವನ್ನು ಬಿಡಿಸಿಕೊಳ್ಳಲು ನಾನು ಪೋಲಿಸರಿಗೆ ದೂರು ಕೊಟ್ಟಿದ್ದೆ ಎಂದರೆ ನಿಜ. ಆದರೆ ಮೊದಲಿನಿಂದ ನಾನೇ ಸಾಗುವಳಿ ಮಾಡುತ್ತಿದ್ದೆ. ಪೋಲಿಸರಿಗೆ ದೂರು ಕೊಡುವ ಕಾಲಕ್ಕೆ ನಮ್ಮ ಖರೀದಿ ಕಾಗದ ಪತ್ರವನ್ನು ಲಗತ್ತಿಸಿ ದೂರು ಕೊಟ್ಟಿದ್ದೆ. ಪೋಲಿಸರು ಪ್ರತಿವಾದಿಯರಿಂದ ಸ್ವಾಧೀನವನ್ನು ಬಿಡಿಸಿಕೊಡಲಿಲ್ಲ. ಪ್ರತಿವಾದಿಯರು ಬೆದರಿಕೆ ಹಾಕಿದ್ದರು ಎಂದು ನಾನು ದೂರು ಕೊಟ್ಟಿದ್ದೆ. ಅನಂತರ ನಾನು ಈ ದಾವೆ ಸಲ್ಲಿಸಿದ್ದೆ. ನಾನು ಬೋಗಸ ಖರೀದಿ ಪತ್ರವನ್ನು ಸೃಷ್ಟಿಸಿ ಪ್ರತಿವಾದಿಯರಿಂದ ದಾವಾ ಆಸ್ತಿಯ ಸ್ವಾಧೀನವನ್ನು ಪಡೆದುಕೊಳ್ಳಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿಯರೇ ಮಾಲಿಕರಿದ್ದಾರೆ ಮತ್ತು ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯರು ದಾವಾ ಆಸ್ತಿಯ ಮಾಲಿಕರು ಮತ್ತು ಸ್ವಾಧೀನದಾರರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ . ನಿಪಿ-2 ಸುಳ್ಳು ಸೃಷ್ಟಿ ಮಾಡಿದ ದಾಖಲೆಯಾಗಿದೆ ಮತ್ತು ದಾವಾ ಆಸ್ತಿಯಲ್ಲಿ ನನಗಾಗಲೀ , ನನ್ನ ತಂದೆಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಸ್ವಾಧೀನದಲ್ಲಿ ಯಾವತ್ತೂ ಇಲ್ಲ ಎಂದರೆ ಸರಿಯಲ್ಲ. ನಾವು ಸ್ವಾಧೀನದಲ್ಲಿಲ್ಲದೇ ಇರುವ ಕಾರಣ ಪ್ರತಿವಾದಿಯರು ಅಡಚಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 20-06-2016 ರಂದು ಪ್ರತಿವಾದಿಯರು ನಮ್ಮ ಸ್ವಾಧೀನಕ್ಕೆ ಅಡಚಣೆ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)
ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ದಿಃ**13-12-2018** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀಮತಿ ಆರ್. ಎಮ್. ಹೆಚ್. ವಕೀಲರಿಂದ</u>

ನಾನು ವಿಠೊಬಾ ಬಾಬು ಪಾಟೀಲರನ್ನು ನೋಡಿದ್ದೇನೆ. ದಿನಾಂಕ ೧೯-೦೭-೧೯೭೬ ರಂದು ಆತನು ಮೃತಪಟಿಟದ್ದಾನೆ ಎಂದರೆ ಆಗ ನಾನು ಚಿಕ್ಕವನಿದ್ದೆ. ಆಗ ನನಗೆ ತಿಳುವಳಿಕೆ ಇರಲಿಲ್ಲ. ಸದರಿ ವಿಠೊಬಾ ಬಾಬು ಪಾಟೀಲರನ್ನು ಸಾವಿತ್ರಿ ಬಾಬು

ಪಾಟೀಲರವರು ದತ್ತಕಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ವಿಠೊಬಾ ಬಾಬು ಪಾಟೀಲರವರ ದತ್ತಕ ಮನೆತನದ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಈ ಜಮೀನು ಇನಾಮ ಜಮೀನು ಇರುವುದಿಲ್ಲ. ದಾವಾ ಜಮೀನಿನ ಬಗ್ಗೆ ಯಾವುದಾದರೂ ರಿಗ್ರಾಂಟ್ ಆದೇಶ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-೨ರ ಅನುವಾದ ಪ್ರತಿ ನಿಪಿ-೨(ಎ)ರಲ್ಲಿ ನಮೂದಿಸಿದ ಅನುವಾದವು ಸರಿಯಾಗಿದೆ. ನಿಪಿ-೨(ಎ)ರಲ್ಲಿ ರಿಗ್ರಾಂಟ್ ಆದ ಜಮೀನಿನ ಕ್ರಯ ಪತ್ರ ಎಂದು ನಾವು ಅನುವಾದಿಸಿದ್ದೇವೆ ಎಂದರೆ ನಿಜ. ಈ ದಾವೆ ಸಲ್ಲಿಸುವ ಮುನ್ನ ಹಾಗೂ ಸಾಕ್ಷಿ ವಿಚಾರಣೆಗಿಂತ ಮುನ್ನ ಆ ರಿಗ್ರಾಂಟ್ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ಆ ಜಮೀನು ರೈತಾವಾ ಆಗಿದೆ ಎಂದು ಈ ದಾವೆ ಸಲ್ಲಿಸುವ ಮುನ್ನ ನಾನು ವಿಚಾರಣೆ ಮಾಡಿದ್ದೆ. ಸದರಿ ರೈತಾವಾ ಆದೇಶವನ್ನು ಯಾರು ಮಾಡಿದ್ದರು ಮತ್ತು ಯಾವ ಇಸವಿಯಲ್ಲಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಬಗ್ಗೆ ನನಗೇನು ಗೊತ್ತಿಲ್ಲ, ನಾನು ಸುಳ್ಳು ಅನುವಾದ ಪ್ರತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮೃತ ವಿಠೊಬಾ ಬಾಬು ಪಾಟೀಲರವರ ಹೆಂಡತಿಯ ಹೆಸರು ರುಕ್ಮಿಣಿ. ಸದರಿ ವಿಠೊಬಾ ಬಾಬು ಪಾಟೀಲ ಮತ್ತು ರುಕ್ಮಿಣಿಗೆ ೭ ಜನ ಹೆಣ್ಣು ಮಕ್ಕಳು ಇದ್ದರು ಮತ್ತು ಅವರಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ನಿಜ. ೧ನೇ ಪ್ರತಿವಾದಿಯು ಆ ೭ ಜನ ಮಕ್ಕಳಲ್ಲಿ ಒಬ್ಬ ಮಗಳು ಎಂದರೆ ನಿಜ. ಆಕೆಯ ಹೆಸರು ತವರು ಮನೆಯಲ್ಲಿ ಕೌಸಲ್ಯಾ ಎಂದು ಇದ್ದು, ಗಂಡನ ಮನೆಯಲ್ಲಿ ಆಕೆಯ ಹೆಸರನ್ನು ಪಾರ್ವತಿ ಎಂದು ಕರೆಯುತ್ತಾರೆ ಎಂದರೆ ನಿಜ. ಆಕೆಯ ಗಂಡ ಶಂಕರ ಲಕ್ಷ್ಮಣ ಪಾಟೀಲರವರು ಬೊಂಬಾರಡಾ ಗ್ರಾಮದವರು ಎಂದರೆ ನಿಜ. ವಿಠೊಬಾ ಬಾಬು ಪಾಟೀಲ ಮತ್ತು ರುಕ್ಮಿಣಿಗೆ ಗಂಡು ಮಕ್ಕಳು ಇಲ್ಲದ ಕಾರಣ ಸದರಿ ಶಂಕರ ಲಕ್ಷ್ಮಣ ಪಾಟೀಲರನ್ನು ಮನೆ ಅಳಿಯನನ್ನಾಗಿ ಅವರ ಮನೆಯಲ್ಲಿಯೆ ಇರಿಸಿಕೊಂಡಿದ್ದರು ಎಂದರೆ ನಿಜ. ಸದರಿ ಶಂಕರ ಮತ್ತು ಪಾರ್ವತಿರವರು ವಿಠೊಬಾ ಬಾಬು ಪಾಟೀಲರವರ ಕುಟುಂಬದ ಎಲ್ಲ ಕೆಲಸ ಕಾರ್ಯಗಳು ಮತ್ತು ಉಳುಮೆಯನ್ನು, ಮನೆ ಮತ್ತು ಜಮೀನಿನ ಉಸ್ತುವಾರಿಯನ್ನು ಮಾಡುತ್ತಿದ್ದರು.

ವಿಠೊಬಾ ಬಾಬು ಪಾಟೀಲರ ಹೆಂಡತಿ ರುಕ್ಮಿಣಿ ಜೀವಂತ ಇದ್ದಾರೆ. ೨ ಮತ್ತು ೩ ನೇ ಪ್ರತಿವಾದಿಯರು ೧ನೇ ಪ್ರತಿವಾದಿಯ ಮಕ್ಕಳು. ಶಂಕರ ಲಕ್ಷ್ಮಣ ಪಾಟೀಲರವರು ದಿನಾಂಕ ೨೧-೦೧-೨೦೧೫ರಂದು ಮೃತಪಟ್ಟರು ಎಂದರೆ ನಿಜ. ವಿಠೊಬಾ ಬಾಬು ಪಾಟೀಲರವರು ೧೯೭೬ರಲ್ಲಿ ಮೃತಪಟ್ಟ ನಂತರ ಆತನ ಎಲ್ಲ ಹೆಣ್ಣು ಮಕ್ಕಳ ಒಪ್ಪಿಗೆಯ ಮೇರೆಗೆ ಎಲ್ಲ ಆಸ್ತಿಗಳ ದಾಖಲೆಗಳಲ್ಲಿ ಆತನ ಹೆಂಡತಿ ರುಕ್ಮಿಣಿ ಹೆಸರನ್ನು ಹಚ್ಚಲಾಗಿತ್ತು ಎಂದರೆ ದಾವಾ ಆಸ್ತಿಯನ್ನು ಹೊರತು ಪಡಿಸಿ ಉಳಿದ ದಾಖಲೆಗಳಲ್ಲಿ ಹಚ್ಚಲಾಗಿತ್ತು. ವಿಠೊಬಾ ಬಾಬು ಪಾಟೀಲರವರು ೧೯೭೬ರಲ್ಲಿ ಮೃತಪಟ್ಟ ನಂತರ ದಾವಾ ಜಮೀನಿನ ದಾಖಲೆಗಳಲ್ಲಿ ನನ್ನ ತಂದೆ ದತ್ತು ಮಷನು ಪಾಟೀಲರವರ ಹೆಸರನ್ನು ಹಚ್ಚಲಾಯಿತು. ಆ ರೀತಿ ಹೆಸರನ್ನು ಹಚ್ಚಿದ ಬಗ್ಗೆ ನ್ಯಾಯಾಲಯಕ್ಕೆ ಮ್ಯುಟೇಶನ್ ಪ್ರತಿ ಅಥವಾ ಪಹಣಿಯನ್ನು ಹಾಜರು ಪಡಿಸಿಲ್ಲ. ನನ್ನ ತಂದೆಯು ೮ ವರ್ಷಗಳ ಹಿಂದೆ ಮೃತಪಟ್ಟರು.

ಕೊಡುಗೈ ಗ್ರಾಮದ ಹದ್ದಿಯಲ್ಲಿ ನಮ್ಮ ಪಿತ್ರಾರ್ಜಿತ ಜಮೀನುಗಳು ಇವೆ. ನನ್ನ ತಂದೆಯ ಮರಣದ ನಂತರ ಆ ಆಸ್ತಿಗಳಿಗೆ ಸಂಬಂಧಿಸಿದಂತೆ ನಾವು ವಾರಸಾ ಮಾಡಿಕೊಂಡಿದೇವೆ. ಆ ಎಲ್ಲ ಆಸ್ತಿಗಳು ನನ್ನ ಮತ್ತು ಇತರ ವಾದಿಯರ ಹೆಸರಿನಲ್ಲಿ ಇವೆ. ನನ್ನ ತಂದೆಯ ಮರಣದ ನಂತರ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ಹೆಸರನ್ನು ನಮೂದಿಸಲು ವಾರಸಾ ಅರ್ಜಿಯನ್ನು ಸಲ್ಲಿಸಿಲ್ಲ. ಈ ದಾವೆ ಸಲ್ಲಿಸುವ ವರೆಗೆ ದಾವಾ ಆಸ್ತಿಯು ನಮ್ಮದು, ವಾರಸಾ ಪ್ರಕಾರ ನಮ್ಮ ಹೆಸರನ್ನು ನಮೂದಿಸಲು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ನಿಜ. ನಮ್ಮ ಪಿತ್ರಾರ್ಜಿತ ಆಸ್ತಿಗಳನ್ನು ಯಾವಾಗ ವಾರಸಾ ಮಾಡಿಕೊಂಡಿದ್ದೇವೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇವೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ವಿಠೊಬಾ ಬಾಬು ಪಾಟೀಲರವರ ಮರಣದ ನಂತರ ದಾವಾ ಆಸ್ತಿಗೆ ರುಕ್ಮಿಣಿಯ ಹೆಸರನ್ನು ಹಚ್ಚಲಾಗಿದ್ದರು ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಹ ಹೇಳುವುದೇನೆಂದರೆ ರುಕ್ಮಿಣಿಯ ಹೆಸರನ್ನು ಹಚ್ಚಲಿಲ್ಲ ಬದಲಾಗಿ

ಶಂಕರ ಲಕ್ಷ್ಮಣ ಪಾಟೀಲರವರ ಹೆಸರನ್ನು ಹಚ್ಚಲಾಯಿತು. ಸದರಿ ಶಂಕರ ಪಾಟೀಲರ ಹೆಸರನ್ನು ತೆಗೆದು ಹಾಕಿ ನಮ್ಮ ಹೆಸರನ್ನು ನಮಾದಿಸುವಂತೆ ಕೋರಿ ಇಲ್ಲಿಯವರೆಗೆ ನಾವು ಯಾವುದೇ ಆರ್ಜಿಯನ್ನು ಸಲ್ಲಿಸಿಲ್ಲ. ಸದರಿ ಶಂಕರ ಪಾಟೀಲರ ಹೆಸರನ್ನು ನನ್ನ ತಂದೆಯ ಮರಣದ ನಂತರ ಹಚ್ಚಲಾಯಿತು. ಆ ರೀತಿಯಗಿ ನನ್ನ ತಂದೆಯ ಹೆಸರನ್ನು ತೆಗೆದು ಹಾಕಿ ಶಂಕರ ಪಾಟೀಲರ ಹೆಸರನ್ನು ಹಚ್ಚಲಾಗಿಲ್ಲ.

ನನ್ನ ತಂದೆಯ ಜೀವಿತಾವಧಿಯಲ್ಲಿ ನನ್ನ ತಂದೆಯು ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ್ದೇನೆ, ನನ್ನ ಹೆಸರನ್ನು ದಾಖಲೆಗಳಲ್ಲಿ ಹಚ್ಚಿ ಎಂದು ಅರ್ಜಿ ಸಲ್ಲಿಸಿದ್ದರು. ಆದರೆ ಶಂಕರ ಪಾಟೀಲರು ಹಾಗೆ ಇರಲಿ ಎಂದು ಹೇಳಿದ್ದಕ್ಕೆ  ಸುಮ್ಮನಾಗಿದ್ದರು. ಆ ರೀತಿ ನನ್ನ ತಂದೆ ಎಲ್ಲಿ ಅರ್ಜಿ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ರೀತಿ ನನ್ನ ತಂದೆಯು ಆರ್ಜಿ ಸಲ್ಲಿಸಿದಾಗ ವಿಠೊಬಾ ಬಾಬು ಪಾಟೀಲ ಮತ್ತು ಶಂಕರ ಪಾಟೀಲ ಆ ಜಮೀನನ್ನು ನಮ್ಮ ತಂದೆಗೆ ಕೊಟ್ಟರು. ನನ್ನ ತಂದೆಯು ಆ ರೀತಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ. ನನ್ನ ತಂದೆಯು ಆ ರೀತಿ ಅರ್ಜಿ ಸಲ್ಲಿಸುವ ಕಾಲಕ್ಕೆ ಈ ಹಿಂದೆ ಸ್ಟಾಂಪ ಪೇಪರ ಮೇಲೆ ಬರೆದುಕೊಟ್ಟಿದ್ದ ದಾಖಲೆಗೆ ವಿಠೊಬಾ ಬಾಬು ಪಾಟೀಲ ಮತ್ತು ಶಂಕರ ಪಾಟೀಲ ಸಹಿ ಮಾಡಿ ಕೊಟ್ಟರು. ನಿಪಿ-೨ ದಾಖಲೆಗೆ ಶಂಕರ ಪಾಟೀಲ ತನ್ನ ಹೆಬ್ಬಟ್ಟಿನ ಗುರುತನ್ನು ಹಾಕಿದ್ದನು. ಆ ಹೆಬ್ಬಟ್ಟಿನ ಗುರುತನ್ನು ಗುರುತಿಸಲು ಆಗುವುದಿಲ್ಲ.

ನನ್ನ ತಂದೆಯು ಂಾವಾ  ಆಸ್ತಿಯನುನ ಖರೀದಿ ಮಾಡಿದ್ದರು, ಅವರು ಅರ್ಜಿ ಸಲಿಲಸುವ ಕಾಲಕ್ಕೆ ವಿಠೊಬಾ ಬಾಬು ಪಾಟೀಲ ಮತ್ತು ಶಂಕರ ಪಾಟೀಲರವರು ನಿಪಿ-೨ಕ್ಕೆ ಸಹಿ ಮಾಡಿದ್ದರು ಮತ್ತು ಆ ಜಮೀನನ್ನು ನನನ ತಂದೆಗೆ ಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-೨ರ ಮೇಲೆ ಶಂಕರ ಪಾಟೀಲರ ಹೆಬ್ಬಟ್ಟಿನ ಗುರುತು ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ದಿಃ**15-09-2017** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರಿ ಎ ಸ್ ಎ ನ್ ಎ ಲ್ ವಕೀಲರಿಂದ

ನಾನು ದಾವಾ ಆಸ್ತಿಯ ಪಹಣಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ **1** ಎಂದು, ನೊಂದಾಯಿತ ಖರೀದಿ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 2 ಎಂದು, **ಅದರ ಇಂಗ್ಲಿಷ್ ಅನುವಾದದ ಪ್ರತಿಯನ್ನು** ನಿಪಿ 2 (ಎ) ಎಂದು ಗುರುತಿಸಲಾಯಿತು.

**(**ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು**)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರಿ ವಿ ಕೆ ಜಿ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು,**
**ಖಾನಾಪೂರ.**

OS.No.248/2016

Pw-1

ದಿಃ **13-07-2017** ರಂದು ಮಧ್ಯಂತರ ಅಜಿ  ಸಂಖ್ಯೆ **3** ರ ಮೇಲಿನ ಆದೇಶದಂತೆ ಪ್ರಾಸಾ **1** ರವರನ್ನು ಮುಂದುವರೆದ ಮುಖ್ಯ ವಿಚಾರಣೆಗೆ ದಿಃ **13-07-2017** ರಂದು ಕರೆಸಿ**,**  ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಮುಖ್ಯ ವಿಚಾರಣೆಃ ಶ್ರಿ ಐ ಎನ ಎನ ವಕೀಲರಿಂದ

ಈಗ ನಿಪಿ **1** ನ್ನು ನೋಡುತ್ತಿದ್ದು ಅದರಲ್ಲಿನ ನನ್ನ ಸಹಿ ಇದೆ**.** ಅದನ್ನು ನಿಪಿ **1** **(**ಸಿ**)** ಎಂದು ಗುರುತಿಸಲಾಯಿತು**.**  ನಿಪಿ **1** ಕ್ಕೆ ಪ್ರತಿವಾದಿ ಸಹಿ ಮಾಡಿದ್ದನು ಆ ಸಹಿಯನ್ನು ಈಗ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ **1** **(**ಡಿ**)** ಎಂದು ಗುರುತಿಸಲಾಯಿತು**.**

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

**ಹೆಚ್ಚವರಿ ನ್ಯಾಯಿಕ ದಂಡಾಧಿಕಾರಿಗಳು**

**ಖಾನಾಪೂರ.**

OS.No.204/2016

Pw-1

ದಿಃ 13-07-2017 ರಂದು ಮಧ್ಯಂತರ ಅಜಿ ಸಂಖ್ಯೆ 3 ರ ಮೇಲಿನ ಆದೇಶದಂತೆ ಪ್ರಾಸಾ 1 ರವರನ್ನು ಮುಂದುವರೆದ ಮುಖ್ಯ ವಿಚಾರಣೆಗೆ ದಿಃ 13-07-2017 ರಂದು ಕರೆಸಿ, ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರಿ ಐ ಎನ ಎನ ವಕೀಲರಿಂದ

ಈಗ ನಿಪಿ 1 ನ್ನು ನೋಡುತ್ತಿದ್ದು ಆದರಲ್ಲಿನ ನನ್ನ ಸಹಿ ಇದೆ. ಆದನ್ನು ನಿಪಿ 1 (ಸಿ) ಎಂದು ಗುರುತಿಸಲಾಯಿತು. ನಿಪಿ 1 ಕ್ಕೆ ಪ್ರತಿವಾದಿ ಸಹಿ ಮಾಡಿದ್ದನು ಆ ಸಹಿಯನ್ನು ಈಗ ಸಾಕ್ಷಿಯು ನೋಡಿ ಗುರುತಿಸಿದ್ದು ಆದನ್ನು ನಿಪಿ 1(ಡಿ) ಎಂದು ಗುರುತಿಸಲಾಯಿತು.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು

ಖಾನಾಪೂರ.

OS.No.204/2016

Pw-3

ದಿಃ 13-07-2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರಿ ಐ ಎನ ಎನ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಈಗ ನಿಪಿ 1 ನ್ನು ನೋಡುತ್ತಿದ್ದು ಅದರಲ್ಲಿನ ನನ್ನ ಸಹಿ ಇದೆ. ಅದನ್ನು ನಿಪಿ 1 (ಬಿ) ಎಂದು ಗುರುತಿಸಲಾಯಿತು. ನನ್ನ ಜೊತೆಯಲ್ಲಿ ಪ್ರಾಸಾ 2 ರವರು ಸಹಿ ಮಾಡಿದ್ದರು ಮತ್ತು ವಾದಿ ಮತ್ತು ಪ್ರತಿವಾದಿಯರು ಸಹ ಸಹಿ ಮಾಡಿದ್ದರು.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು

ಖಾನಾಪೂರ.

OS.No.204/2016

Pw-2

ದಿಃ 13-07-2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರಿ ಐ ಎನ ಎನ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಈಗ ನಿಪಿ 1 ನ್ನು ನೋಡುತ್ತಿದ್ದು ಅದರಲ್ಲಿನ ನನ್ನ ಹೆಬ್ಬೆಟ್ಟಿನ ಗುರುತು ಇದೆ. ಅದನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ನನ್ನ ಜೊತೆಯಲ್ಲಿ ಪರಶುರಾಮ ಗುರವ ಸಹಿ ಮಾಡಿದ್ದರು.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

ಓ .ಹೇ .ಕೇ .ಸರಿ ಇದೆ .

ಹೆಚ್ಚವರಿ ನ್ಯಾಯಿಕ ದಂಡಾಧಿಕಾರಿಗಳು

ಖಾನಾಪೂರ.

On being allowed I A no 14. Pw-1

Witness duly sworn on :07/03/2017

Chief examn. By Shri. adv. for Plaintiff.

I have filed affidavit in lieu of my examination in chief and its contents are true and correct.

I have produced Registered original sale deed and it is marked as Ex P-19, another original registered sale deed dated: 4-5-1966 is marked as Ex P-20.

Cross Examination: . Deferred

(Typed to my dictation in the open court)

R O I & A C,

Addl. C J & JMFC, Khanapur